# ಶ್ರೀಮಾತೆಯವರೊಡನೆ ಮಾತುಕತೆ



## ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು

### ೧೮.೯.೧೯೧೨ (ರಾಧಾಷ್ಟಮಿಯ ದಿವಸ)

ಶ್ರೀಮಾತೆಯವರು ತಾವಾಗಿಯೇ ಹೇಳಲು ಆರಂಭಿಸಿದರು: "ಯಾರು ವ್ಯಾಕುಲತೆಯಿಂದ ಅಂತಃಕರಣಪೂರ್ವಕವಾಗಿ ಶ್ರೀರಾಮಕೃಷ್ಣರನ್ನು ಕರೆಯುತ್ತಾರೋ, ಅವರು ನಿಶ್ಚಯವಾಗಿ ಅವರ ದರ್ಶನ ಪಡೆಯುತ್ತಾರೆ. ಕೆಲದಿನಗಳ ಹಿಂದೆ ತೇಜ ಚಂದ್ರ (ಮಿತ್ರ) ದೇಹತ್ಯಾಗ ಮಾಡಿದ. ಆತ ಎಂಥಹ ಸದ್ಗುಣಿ! ಶ್ರೀರಾಮಕೃಷ್ಣರೂ ಸಹ ಅವನ ಮನೆಗೆ ಹೋಗುತ್ತಿದ್ದರು. ಒಮ್ಮೆ ಅವನಲ್ಲಿ ಜಮಾ ಮಾಡಿ ಇಟ್ಟಿದ್ದ ೨೦೦ ರೂಪಾಯಿಗಳನ್ನು ಯಾರೋ ಟ್ರಾಮ್‌ನಲ್ಲಿ ಜೇಬಿನಿಂದ ಕದ್ದರು. ಮನೆಗೆ ಬಂದ ಮೇಲೆ ನೋಡಿದರೆ ಹಣ ಇಲ್ಲ! ಅವನು ಬಡವ. ಅದನ್ನು ತನ್ನ ಜೇಬಿನಿಂದ ತುಂಬಿಕೊಡುವ ಶಕ್ತಿ ಅವನಿಗೆ ಇರಲಿಲ್ಲ. ಹಾಗಾಗಿ ಗಂಗಾ ತಟದಲ್ಲಿ ಅತ್ಯಂತ ವ್ಯಾಕುಲತೆಯಿಂದ, 'ಹೇ ಠಾಕೂರ್, ಇದೇನು ಮಾಡಿಬಿಟ್ಟಿರಿ?' ಎಂದು ಅಳುತ್ತಿದ್ದ. ಆ ಸಮಯದಲ್ಲಿ ನೋಡುತ್ತಾನೆ, ಶ್ರೀರಾಮಕೃಷ್ಣರೇ ಅವನ ಮುಂದೆ ನಿಂತು, 'ಅಳುವ ಕಾರಣವಾದರೂ ಏನು? ನೋಡು, ಇದೇ ತೀರದಲ್ಲಿ (ನಿನ್ನ ಹಣ) ಇಟ್ಟಿಗೆಯಿಂದ ಮುಚ್ಚಲ್ಪಟ್ಟಿದೆ, ನೋಡು' ಎಂದರು. ಆತನು ತಕ್ಷಣ ಎದ್ದು, ಸ್ವಲ್ಪ ದೂರದಲ್ಲೇ ಇಟ್ಟಿಗೆ ಇರುವುದನ್ನು ನೋಡಿದ. ಅದನ್ನು ಎತ್ತಿ ನೋಡಿದರೆ, ಅಲ್ಲಿ ನೋಟಿನ ಕಂತೆ ಇತ್ತು. ಆತನು ನಂತರ ಈ ಘಟನೆಯನ್ನು ಶರತ್‌ಗೆ (ಸ್ವಾಮಿ ಶಾರದಾನಂದರು) ಹೇಳಿದ. ಶರತ್ ಎಲ್ಲವನ್ನೂ ಕೇಳಿ, 'ನೀವೆಲ್ಲಾ ಭಾಗ್ಯವಂತರು. ಈಗಲೂ ಶ್ರೀರಾಮಕೃಷ್ಣರ ದರ್ಶನ ಪಡೆಯುತ್ತಿರುವಿರಿ! ನಾವಂತೂ ಪಡೆಯಲಿಲ್ಲ' ಎಂದನು. ಹಾಗೆ ನೋಡಿದರೆ, ಅವರೇಕೆ ದರ್ಶನ ಪಡೆಯಬೇಕು? ಶ್ರೀರಾಮಕೃಷ್ಣರ ಸಾನ್ನಿಧ್ಯದಲ್ಲಿದ್ದು ಅವರ ಮನಸ್ಸು ಎಲ್ಲ ಆಸೆಗಳನ್ನೂ ಪೂರೈಸಿಕೊಂಡು (ಪೂರ್ಣಕಾಮ) ಹಾಗೆ ಆಗಿದೆ. ಯಾರು ಶ್ರೀರಾಮಕೃಷ್ಣರನ್ನು ಬರಿಯ ಕಣ್ಣಿನಿಂದ ನೋಡಿಲ್ಲವೋ ಅವರ ವ್ಯಾಕುಲತೆಯೇ ಈಗ ಹೆಚ್ಚು." ಮುಂದುವರಿಸುತ್ತ ಶ್ರೀಮಾತೆಯವರು ಹೇಳಿದರು: "ಶ್ರೀರಾಮಕೃಷ್ಣರದು ಎಂತಹ ಸರಳ ಶಿಶು ಸ್ವಭಾವ! ಒಮ್ಮೆ ದಕ್ಷಿಣೇಶ್ವರದಲ್ಲಿ ರಾಖಾಲ ಮತ್ತಿತರರು ಅವರ ಜೊತೆ ಇದ್ದರು. ಒಂದು ದಿನ ರಾಖಾಲ ಬಹಳ ಹಸಿವಾಗುತ್ತಿದೆ ಎಂದು ಶ್ರೀರಾಮಕೃಷ್ಣರ ಬಳಿ ಬಂದು ಹೇಳಿದನು. ಈ ಮಾತನ್ನು ಕೇಳಿದ ಕೂಡಲೇ ಶ್ರೀರಾಮಕೃಷ್ಣರು ಗಂಗಾತೀರಕ್ಕೆ ಓಡಿಹೋಗಿ, ಕೂಗಿ ಹೇಳುತ್ತಾರೆ: 'ಓ ಗೌರ್ ದಾಸಿ! ಬೇಗ ಬಾ. ರಾಖಾಲನಿಗೆ ಬಹಳ ಹಸಿವೆಯಂತೆ' ಎಂದು. ಆಗ ದಕ್ಷಿಣೇಶ್ವರದಲ್ಲಿ ಈಗಿನ ರೀತಿ ಉಪಾಹಾರ ಮಂದಿರಗಳು ಇರಲಿಲ್ಲ. ಸ್ವಲ್ಪ ಸಮಯದ ನಂತರ, ಗಂಗೆಯ ಮೇಲೆ ನೌಕೆಯಲ್ಲಿ ಬಲರಾಮ್ ಬಾಬು, ಗೌರ್ ದಾಸಿ ಮುಂತಾದ ಭಕ್ತರು ಒಂದು ಮಡಿಕೆ ತುಂಬ ರಸಗುಲ್ಲ ತೆಗೆದುಕೊಂಡು ಬಂದರು. ಶ್ರೀರಾಮಕೃಷ್ಣರು ಆನಂದದಿಂದ ರಾಖಾಲನಿಗೆ ಕೂಗಿ ಹೇಳುತ್ತಿದ್ದಾರೆ, 'ಏಯ್, ಬಾರೋ, ಬಾ, ಹೊಟ್ಟೆ ಹಸಿವು ಎಂದೆಯಲ್ಲ. ನೋಡು, ರಸಗುಲ್ಲ ಬಂದಿದೆ. ಇದನ್ನು ತಿನ್ನು' ಇದರಿಂದ ರಾಖಾಲನಿಗೆ ನಾಚಿಕೆಯಾಯಿತು. ಶ್ರೀರಾಮಕೃಷ್ಣರ ಮೇಲೆ ಕೋಪವೂ ಬಂತು. ಅವನು 'ನೀವು ಎಲ್ಲರಿಗೂ ಈ ರೀತಿ ಹೇಳುವುದಾದರೂ ಏಕೆ?' ಎಂದನು. ಅದಕ್ಕೆ, 'ಅದರಲ್ಲೇನಿದೆ? ಹಸಿವಾಗಿದೆ, ತಿನ್ನುತ್ತೀಯೆ. ಇದನ್ನು ಹೇಳಿದರೆ ತಪ್ಪೇನಿದೆ?' ಎಂದರು ಬಾಲಕಸ್ವಭಾವದ ಶ್ರೀರಾಮಕೃಷ್ಣರು."

ಅಷ್ಟರಲ್ಲಿ ಭೂದೇವ (ಶ್ರೀಮಾತೆಯವರ ತಮ್ಮನ ಮಗ) ಜ್ವರದಿಂದಾಗಿ ಶಾಲೆಯಿಂದ ಹಿಂದಿರುಗಿದ, ಅವರ ಆದೇಶದಂತೆ ನಾನು ಅವನ ಹಾಸಿಗೆಯನ್ನು ಹಾಸಿ, ಮಲಗಿಸಿದೆ. ಇಂದು ಶ್ರೀಮಾತೆಯವರು ರಕ್ತಭೇದಿಯಿಂದ ಬಳಲುತ್ತಿರುವ ಬಲರಾಮ ಬಾಬುವಿನ ಹೆಂಡತಿಯನ್ನು ನೋಡಲು ಹೋಗುವ ಕಾರ್ಯಕ್ರಮವಿತ್ತು. ಆದ್ದರಿಂದ ಅವರು ಸಂಜೆಯ ಕೆಲಸಗಳನ್ನು ಬೇಗ ಬೇಗ ಮುಗಿಸುತ್ತಿದ್ದಾರೆ. ಅವುಗಳ ನಡುವೆಯೇ ನನಗೆ ಹೇಳಿದರು: "ಒಮ್ಮೆ ಹೋಗಲೇಬೇಕು. ನೀನು ಮಾಕುವಿನ (ಶ್ರೀಮಾತೆಯವರ ತಮ್ಮನಾದ ಪ್ರಸನ್ನನ ಮೊದಲನೆಯ ಹೆಂಡತಿಯ ಮಗಳು) ಶಾಲೆಯ ಗಾಡಿ (ನಿವೇದಿತಾ ಶಾಲೆ) ಬಂದರೆ ಸ್ವಲ್ಪ ಇರಲು ಹೇಳು." ನೈವೇದ್ಯವಾದ ಮೇಲೆ ಪ್ರಸಾದ ಸ್ವೀಕರಿಸಲು ಹೇಳಿದರು. ನಾನು ಒಲ್ಲೆ ಎಂದೆ. ಅದಕ್ಕೆ ಅವರು, "ಇರಲಿ, ಆಮೇಲೆ ತಿನ್ನುವೆಯಂತೆ. ನಳಿನಿ (ಮಾಕುವಿನ ಅಕ್ಕ), ಆಮೇಲೆ ಇವಳಿಗೆ ಪ್ರಸಾದ ಕೊಡು" ಎಂದು ಹೇಳಿದರು. ಗಾಡಿ ಬಂದಿತು. ಶ್ರೀಮಾತೆಯವರು "ಈಗಲೇ ಬಂದು ಬಿಡುತ್ತೇನೆ. ಇಲ್ಲೇ ಇರು. ನಾನು ಬರುವ ತನಕ ಹೋಗಬೇಡ" ಎಂದು ಹೇಳಿದರು. ಗೋಲಾಪ್ ಮಾ ಜೊತೆಗೆ ಹೋಗಿ ಸುಮಾರು ಒಂದು ಗಂಟೆಯ ನಂತರ ಹಿಂತಿರುಗಿದರು.

(ಮುಂದುವರಿಯುವುದು)